
ಎನ್. ಜಗನ್ನಾಥ ಪ್ರಕಾಶ್

ಸಾಹಿತ್ಯ, ಅಭಿನಯ ಪ್ರೀತಿಯ

# ದೊಡ್ಡನಗೌಡ



ಅಭಿನಯ ಹಾಗೂ ಗಾಯನದಿಂದ ರಂಗಭೂಮಿಯಲ್ಲಿ ವಿಶಿಷ್ಟ ಛಾಪು ಮೂಡಿಸಿದ್ದ ಜೋಳದರಾಶಿ ದೊಡ್ಡನಗೌಡರು ಸಾಹಿತ್ಯ, ಸಂಗೀತ ಹಾಗೂ ಗಮಕ ಕ್ಷೇತ್ರದಲ್ಲೂ ಅನನ್ಯ ಪ್ರತಿಭೆ ತೋರಿದ ಕಲಾವಿದ.

ಕೃಷಿ ಕುಟುಂಬದಲ್ಲಿ ಹುಟ್ಟಿದ ದೊಡ್ಡನಗೌಡರಿಗೆ ತಮ್ಮ ಹಳ್ಳಿಯ ಆಸುಪಾಸಿನಲ್ಲಿ ಜನಪ್ರಿಯವಾಗಿದ್ದ ರಂಗಭೂಮಿಯಲ್ಲಿ ಒಲವು. ತಂದೆ ಪಂಪನಗೌಡರಿಂದ ಇದಕ್ಕೆ ವಿರೋಧ. ಚಿಕ್ಕಂದಿನಲ್ಲೇ ತಾಯಿಯನ್ನು ಕಳೆದುಕೊಂಡ ತಮ್ಮ ಏಕೈಕ ಮಗನ ಕಲೆಯ ಗೀಳಿಗೆ ಪಂಪನ ಗೌಡರು ಅಡ್ಡಿಯೇನು ಬರಲಿಲ್ಲ. ಕಲೆಯ ಗೀಳು ಹಚ್ಚಿಕೊಂಡು ಶಾಲೆಯಲ್ಲಿ ನಾಟಕಗಳಲ್ಲಿ ಅಭಿನಯಿಸಿ ಪ್ರೇಕ್ಷಕರಿಂದ ಮೆಚ್ಚುಗೆ ಗಳಿಸಿಕೊಂಡ ಗೌಡರು ರಂಗ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡರು.

ಹತ್ತನೆಯ ವಯಸ್ಸಿನಿಂದಲೇ ಬಣ್ಣದ ಮನೆಯ ನಂಟು ಬೆಳೆಸಿಕೊಂಡ ಇವರು ಕೊನೆಗೆ 'ಸರ್ವ ಜನ ಮನೋರಂಜನ ಕರ್ನಾಟಕ ನಾಟಕ ಸಭಾ'ಗೆ ಅಧಿಕೃತವಾಗಿ ಸೇರ್ಪಡೆಯಾಗಿ ರಂಗಯಾನ ಆರಂಭಿಸಿದರು. 'ಜಲಂದರ', 'ಗರುಡ ಗರ್ವಭಂಗ', 'ಶಾಪ ವಿಮೋಚನೆ', 'ಚವತಿ ಚಂದ್ರ' ಮೊದಲಾದ ನಾಟಕಗಳು ಪ್ರದರ್ಶನಗೊಳ್ಳುತ್ತಿದ್ದವು. ದೊಡ್ಡನಗೌಡರು ಪ್ರಮುಖ ಪಾತ್ರಗಳನ್ನು ನಿರ್ವಹಿಸುವ ಕಲಾವಿದರೆನ್ನಿಸಿಕೊಂಡರು.

ಇದೆಲ್ಲರಿಂದ ಉತ್ತೇಜನಗೊಂಡ ಗೌಡರು ಆಸಕ್ತ ರೈತ ಮಕ್ಕಳನ್ನೇ ಸೇರಿಸಿಕೊಂಡು ಸ್ವಂತ ನಾಟಕ ಮಂಡಳಿಯನ್ನು ಸ್ಥಾಪಿಸುವುದಕ್ಕೆ ಮುಂದಾಗಿ ಅದನ್ನು 'ಶ್ರೀ ಗವಿಮಠದ ಚೆನ್ನಬಸವೇಶ್ವರ ಕೃಪಾ ಪೋಷಿತ ಸಂಗೀತ ನಾಟಕ ಸಂಘ' ಎಂದು ಕರೆದರು. ಇದೊಂದು ಬಗೆಯ ಹವ್ಯಾಸಿ ತಂಡವಾಗಿ ಕಾರ್ಯ ನಿರ್ವಹಿಸತೊಡಗಿತು.

ಆ ಭಾಗದ ಜನಪ್ರಿಯ ನಾಟಕಗಳನ್ನು ಪ್ರದರ್ಶಿಸುತ್ತಿದ್ದ ನಾಟಕ ಸಂಘ ಮಳೆಗಾಲ ಆರಂಭವಾಗುತ್ತಿದ್ದಂತೆ ಬಂದ್ ಆಗುತ್ತಿತ್ತು. ಮಹಿಳಾ ಪಾತ್ರಧಾರಿಗಳನ್ನು ಮಾತ್ರ ಹೊರಗಿನಿಂದ ಆಹ್ವಾನಿಸಲಾಗುತ್ತಿತ್ತು. ಉಳಿದೆಲ್ಲ ಪಾತ್ರಗಳನ್ನು ರೈತರ ಮಕ್ಕಳೇ ಅಭಿನಯಿಸುತ್ತಿದ್ದರು, ನಾಟಕ ಸಂಘಕ್ಕೆ ಹೆಚ್ಚಿನ ಹಣಕಾಸಿನ ಹೊರೆಯೂ ಇರಲಿಲ್ಲ. ಸುಗ್ಗಿ ಚಟುವಟಿಕೆಗಳು ಮುಗಿದ ಮೇಲೆ ಮತ್ತೆ ನಾಟಕಗಳ ಪ್ರದರ್ಶನ ಶುರುವಾಗುತ್ತಿತ್ತು.

ರಂಗಭೂಮಿಗೆ ಅಗತ್ಯವಾದ ಹಾಡುಗಾರಿಕೆ, ನಟನೆಯನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದ ಗೌಡರು ಬಿಡುವಿನ ವೇಳೆಯಲ್ಲಿ ಸಾಹಿತ್ಯದ ಕಡೆಗೂ ಗಮನ ಹರಿಸಿದರು. ಪರಿಪೂರ್ಣ ಕಲಾವಿದ